11 ಹಿರಣ್ಯಕೇಶಿ ನದಿಯಿಂದ ನೀರೆತ್ತದಿರುವಂತೆ ತಡೆಯಾಜ್ಞೆ ಹೊರಡಿಸಿರುವುದನ್ನು ಹಿಂತೆಗೆಯಂವುದಂ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) —ಮಾನ್ಯ ಅಧ್ಯಕ್ಷರೆ, ಬೆಳಗಾವಿಯನ್ನು ಕರ್ನಾಟಕದಲ್ಲಿ ಉಳಿಸಿಯೇ ಸಿದ್ದ ಎಂದು ಘೋಷಿಸುತ್ತಿರುವ ಕರ್ನಾಟಕ ಸರ್ಕಾರಕ್ಕೆ ಬೆಳಗಾವಿ ಜಿಲ್ಲೆಯ ಜನರ ಬದುಕಿಗೆ ಭದ್ರತೆ ನೀಡಬೇಕಾದ ಅವಶ್ಯಕತೆಗಳನ್ನು ಪೂರೈಸಬೇಕಾದ ಬದ್ಧತೆಯೂ ಇದೆ. ಇತ್ತೀಚಿನ ಸರ್ಕಾರೀ ಆಜ್ಞೆ ಪ್ರಕಾರ ರೈತರು ಹಿರಣ್ಯಕೇಶಿ ನದಿಯಿಂದ ನೀರೆತ್ತುವಂತಿಲ್ಲ. ಇಷ್ಟು ದಿನ ನೀರೆತ್ತಬೇಕೆಂದಾಗ ಕೆಲವೊಮ್ಮೆ ವಿದ್ಯುತ್ ಪೂರೈಕೆ ಇರುತ್ತಿರಲಿಲ್ಲ. ಈಗ ಎಲ್ಲಾದರೂ ವಿದ್ಯುತ್ ಪೂರೈಕೆ ಆದರೂ ಸರ್ಕಾರವೇ ನೀರೆತ್ತದಂತೆ ತಡೆಯಾಜ್ಞೆ ನೀಡಿದೆ. ಇದರಿಂದಾಗಿ ಸಹಸ್ರಾರು ಎಕರೆ ಗಳಲ್ಲಿ ರೈತರು ಬೆಳೆದ ವಿವಿಧ ಬೆಳೆಗಳು ಒಣಗುವಂತಾಗಿದೆ. ನೀರಿಲ್ಲದ ಭೂಮಿಗೆ ಸರ್ಕಾರ ನೀರಾವರಿ ಯೋಜನೆಯ ಮೂಲಕ ನೀರನ್ನೊದಗಿಸಬೇಕು. ಈಗೀಗ ಯಾವ ಯೋಜನೆಯೂ ಇಲ್ಲ. ಹೋಗಲಿ, ರೈತರಾದರೂ ಸ್ವಂತ ಖರ್ಚಿನಿಂದ ಪಂಪು ಹಾಕಿ ನೀರು ಹಾಯಿಸಬೇಕೆಂದರೆ ಅದಕ್ಕೂ ಸರ್ಕಾರದ ತಡೆ. 'ನದಿಯ ನೀರಿಗೂ ದೊಣ್ಣೆನಾಯಕನ ಅಪ್ಪಣೆ'' ಎಂಬ ಹಳೆಯ ರಾಜರ ಕಾಲದ ಗಾದೆ ಮಾತನ್ನು ನೆನಪಿಗೆ ತರುತ್ತಿದೆ. ಸರ್ಕಾರಕ್ಕೆ ನಿಜವಾಗಿಯೂ ರೈತರ ಮೇಲೆ ಕಳಕಳಿ ಇದ್ದರೆ ತಡೆಯಾಜ್ಞೆ ಹಿಂತೆಗೆದುಕೊಳ್ಳುವುದೇ ಅಥವಾ ನೀರಾವರಿ ಭೂಮಿಗಳನ್ನು ಇಂಥ ತಡೆಯಾಜ್ಞೆ ಮೂಲಕ ಒಣ ಭೂಮಿ ಆಗಿ ಪರಿವರ್ತಿಸಿ ಒಣ ಭೂಮಿ ಅಭಿವೃದ್ಧಿ ಯೋಜನೆ ಕಾರ್ಯಗತಗೊಳಿಸುವ ಸಂಚಿನ ಸಿದ್ದತೆಯಲ್ಲಿದೆಯೇ ಎಂದು ಕೇಳಬಯಸುತ್ತೇನೆ,

ಶ್ರೀ ಎ ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ

12 ಕರಾವಳಿಯ ಪ್ರಮುಖ ಕೈಗಾರಿಕೆಯಾದ ಹೆಂಚಿನ ಉದ್ದಿಮೆ ಅವನತಿಯಂಲ್ಲಿರುವುದಂ.

ಶ್ರೀ ಜಿ. ಎಸ್. ಆಚಾರ್(ಬೈಂದೂರು) —ಮಾನ್ಯ ಅಧ್ಯಕ್ಷರೇ, ನೂರಂ ವರುಷಗಳ ಭವ್ಯ ಇತಿಹಾಸವಿರುವ, ಕರ್ನಾಟಕದ ಕರಾವಳಿಯ ಪ್ರಮುಖ ಕೈಗಾರಿಕೆಯಾದ ಹೆಂಚಿನ ಉದ್ದಿಮೆ ಇಂದು ಅತ್ಯಂತ ಅವನತಿಯ ಅಂಚಿನಲ್ಲಿದೆ. ಉತ್ಪಾದನೆಯ ಶೇಕಡ ೫೦ ರಷ್ಟು ಕರ್ನಾಟಕದಲ್ಲಿ ಉಪಯೋಗಿ ಸಲ್ಪಟ್ಟಿದೆ, ಉಳಿದರ್ಧಕ್ಕೆ, ಮಾರುಕಟ್ಟೆ, ಗೋವಾ, ಮಹಾರಾಷ್ಟ್ರ, ಗುಜರಾತ್‌ಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಆಲ್ಲಿನ ಸರಕಾರಗಳು ೧) ಉದ್ದಿಮೆ ಸ್ಥಾಪನೆಗೆ ಸಹಾಯಧನ ೨) ಮಾರಾಟ ತೆರಿಗೆ ಯಿಂದ ವಿನಾಯಿತಿ ೩) ಹತ್ತಿರದ ಲೆಗ್ನೈಟ್ ಗಣಿಗಳಿಂದ ಬಾತ್ತು ಅರಣ್ಯ ಇಲಾಖೆಯಿಂದ ಅಗ್ಗದ ಹಾಗೂ ಸಬ್ಸಿಡಿಯುಕ್ತ ಇಂಧನ-ಸೌದೆ ಪೂರೈಕೆ ೪) ಕಷ್ಟಕೂಲಿಯ ಘೋಷಿತ ನಿಯಮವಿಲ್ಲದಿರುವುದು ಈ ಸವಲತ್ತುಗಳನ್ನು ನೀಡಿದ ಪ್ರಯುಕ್ತ ಸಾವಿರ ಹೆಂಚಿಗೆ ರೂ. ೬೦೦ ರಿಂದ ರೂ. ೭೦೦ ದರದಲ್ಲಿ ಮೋರ್ನಿಯಲ್ಲಿ ತಯಾರಾಗುತ್ತಿದೆ. ಅದೇ ಮಂಗಳೂರಲ್ಲಿ ಸಾವಿರ ಹಂಚಿಗೆ ರೂ. ೧೩೦೦ ರಿಂದ ರೂ. ೧೩೫೦ ರಷ್ಟು. ಹೀಗಾಗಿ ಮಹಾರಾಷ್ಟ್ರ, ಗುಜರಾತಿನಲ್ಲಿ ಕರ್ನಾಟಕದ ಹೆಂಚಿನ ಕಾರ್ಖಾನೆ ಗಳಿಂದ ಉತ್ಪಾದನೆ ಆದ ಹೆಂಚಿಗೆ ಮಾರಾಟವಿಲ್ಲದಾಗಿದೆ. ಕೋಟ್ಯಾಂತರ ರೂಪಾಯಿಗಳ ಬಂಡವಾಳ ದಿಂದ ಪ್ರಾರಂಭವಾದ, ಸಹಸ್ರಾರು ಕೂಲಿಕಾರರು ದುಡಿಯುವ, ಪರೋಕ್ಷವಾಗಿ ಸಹಸ್ರಾರು ಜನರಿಗೆ ಉದ್ಯೋಗ ನೀಡಿತ್ತಿರುವ ಈ ಉದ್ದಿಮೆಗಳು ವಾರಾಟವಿಲ್ಲದ ಸ್ಥಗಿತಗೊಂಡಿದೆ. ದಕ್ಷಿಣ ಕನ್ನಡದಲ್ಲೇ ಹೇರಳ ಹೆಂಚು ದಾಸ್ತಾನಿದ್ದು ವಾರಾಟವಿಲ್ಲ. ಕರ್ನಾಟಕದ ಈ ಪ್ರಾಮುಖ್ಯ ಉದ್ದಿಮೆ ಯನ್ನು ಉಳಿಸುವ ದೃಷ್ಟಿಯಿಂದ ಸರಕಾರ ೧) ಸಾಕಷ್ಟು ಕಟ್ಟಿಗೆಯನ್ನು ಎಲ್ಲಾ ಕಾರ್ಖಾನೆಗಳಿಗೆ ಕಡಿಮೆ ದರದಲ್ಲಿ ಪೂರೈಸಬೇಕು ೨) ಕಟ್ಟಿಗೆಗಾಗಿ ಮರ ಬೆಳೆಸಲು ಕಾರ್ಖಾನೆಗಳಿಗೆ ಖಾಲಿ ಜಾಗ ಗುತ್ತಿಗೆ ಮೇಲೆ ನೀಡಬೇಕು. ೩) ಆಸ್ಟ್ರೇಲಿಯಾದಿಂದ ಕಲ್ಲಿದ್ದಲು ಆಮದು ಮಾಡಲು ಕಸ್ಟಂ-ಇಂಪೋರ್ಟ್ ತೆರಿಗೆ ವಿನಾಯಿತಿಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು. ೪) ಶೇಕಡಾ ೪ ರಿಂದ ೫ ಬೂದಿ ಇರುವ ಸ್ಟೀಂ ಕೋಲ್ ಒದಗಿಸಲು ಮಂಗಳೂರಲ್ಲಿ ಕೋಲ್ ಇಂಡಿಯಾದವರ ಕೋಲ್ ಡಿಪೋ ತೆರೆಯಬೇಕು. ೫) ಸರಕಾರದ ವಿವಿಧ ಇಲಾಖೆಗಳ ಉದ್ದಿಮೆಗಳ ಮೂಲಕ ಕಟ್ಟಿಸುವ ಕಟ್ಟಡಗಳಿಗೆ ಕಾಂಕ್ರೀಟು ಅಥವಾ ಕಲ್ನಾರು ಛಾವಣಿ ಬದಲು ಹೆಂಚಿನ ಛಾವಣಿ ಹಾಕುವಂತಾಗಬೇಕು.